ಅ.ದಾ. ಸಂಃ 123/2019 ಪಿ.ಡಬ್ಲ್ಯು: 01

ದಿನಾಂಕಃ 27-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಕೆ.ಬಿ.ಜಿ ವಕೀಲರಿಂದಃ

ಸರ್ವೆ ನಂ.161 ರ 7 ಎಕರೆ 18 ಗುಂಟೆ ಜಮೀನಿನಲ್ಲಿ ದೊಡ್ಡನಾರಾಯಣಪ್ಪ ರವರಿಗೆ ಯಾವುದೇ ಪಾಲು ಕೊಟ್ಟಿಲ್ಲ. ಸದರಿ ಆಸ್ತಿಯಲ್ಲಿ ನಿಪಿ-1 ರಂತೆ ದೊಡ್ಡ ನಾರಾಯಣಪ್ಪ ಮತ್ತು ಹನುಮಂತರಾಯಪ್ಪ ರವರಿಗೆ ಪಾಲು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ರಂತೆ ನಾರಾಯಣಪ್ಪನ ಮಗ ಮೈಲಾರಪ್ಪನಿಗೆ ಸದರಿ 7 ಎಕರೆ 18 ಗುಂಟೆ ಜಮೀನಿನ ಪೈಕಿ ಉತ್ತರದ ಕಡೆ 2 ಎಕರೆ 19 ಗುಂಟೆ ಜಮೀನು ಬಂದಿರುತ್ತದೆ. ಸದರಿ 2 ಎಕರೆ 19 ಗುಂಟೆ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ದಿನಾಂಕ 27-08-1986 ರ ಪತ್ರದಲ್ಲಿ ನಿಪಿ-1 ರ ವಿಚಾರವನ್ನು ಬರೆಯಲಾಗಿದೆ. ಆಸ್ತಿಯ ವಿವರಣೆ ಮತ್ತು ಚೆಕ್ಕುಬಂದಿಯನ್ನು ದಿನಾಂಕ 27-08-1986 ರ ಪತ್ರದಲ್ಲಿ ಬರೆಯಲಾಗಿದೆ. ಸದರಿ ಪತ್ರದ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಪಿ-25 ರ ಆದೇಶದ ಪ್ರತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಿಪಿ-13 ರ ಆಸ್ತಿಯು ಮೈಲಾರಪ್ಪನಿಗೆ ಸೇರಿದ್ದು ಎಂದರೆ ಸರಿ. 1947 ರಿಂದ ಮೈಲಾರಪ್ಪನ ಹೆಸರಿಗೆ ನಿಪಿ-13 ರ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆ ಆಗಿರಲಿಲ್ಲ ಎಂದರೆ ಸರಿ.

ನಿಪಿ-13 ರ ಆಸ್ತಿ ನನಗೆ ಸಂಬಂಧಿಸಿದ್ದಲ್ಲವಾದ್ದರಿಂದ ಶಂಕರನಾರಾಯಣ ರವರನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇಲ್ಲ. ನಿಪಿ-14 ರಲ್ಲಿ ನಮೂದಿಸಿರುವ ಸಂಜೀವರಾಯಪ್ಪ ರವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇಲ್ಲ. ದಾನ ಪತ್ರವನ್ನು ಗಂಗಮ್ಮ ಮಾತ್ರ ಮಾಡಿಕೊಟ್ಟಿರುತ್ತಾರೆ. ಗಂಗಮ್ಮನಿಗೆ ಪಾಪಣ್ಣ ಎನ್ನುವ ಮಗ ಇದ್ದಾನೆ ಎಂದರೆ ಸರಿ. ಸದರಿ ದಾನ ಪತ್ರಕ್ಕೆ ಪಾಪಣ್ಣ ಸಹ ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ ಪಾಪಣ್ಣನನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ. ದೊಡ್ಡನಾರಾಯಣಪ್ಪನ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ. ದೊಡ್ಡನಾರಾಯಣಪ್ಪ ಮತ್ತು ಹನುಮಂತರಾಯಪ್ಪನ ಮಧ್ಯೆ ಆದಂತಹ ವಿಭಾಗ ಪತ್ರದ ಸಮಯಕ್ಕೆ ದೊಡ್ಡನಾರಾಯಣಪ್ಪ ನ ಮಕ್ಕಳು ವಯಸ್ಕರು ಆಗಿದ್ದರು. ದೊಡ್ಡನಾರಾಯಣಪ್ಪನ ಮಕ್ಕಳು ಸದರಿ ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ.

ಅ.ದಾ. ಸಂಃ 123/2019 ಪಿ.ಡಬ್ಲ್ಯು: 01

ಮಲ್ಲಯ್ಯ ರವರು 2 ಎಕರೆ 19 ಗುಂಟೆ ಜಮೀನನ್ನು 1966 ರಲ್ಲಿ ಶ್ರೀನಿವಾಸಯ್ಯ ರವರಿಗೆ ಆಧಾರ ಮಾಡಿ ತದನಂತರ ಬಿಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ಮಲ್ಲಯ್ಯನ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಇದ್ದ ಕಾರಣ ಅವರು 2 ನೇ ಪ್ರತಿವಾದಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿ. ತಹಸೀಲ್ದಾರ್ ನ್ಯಾಯಾಲಯದಲ್ಲಿ ಸರ್ವೆ ನಂಬರ್ ತಿದ್ದುಪಡಿ ವಿಚಾರವಾಗಿ ನಡೆದಂತಹ ಪ್ರಕರಣ ಮತ್ತು ತೀರ್ಪಿನ ಬಗ್ಗೆ ಗೊತ್ತಿದೆ. ಸದರಿ ತಿದ್ದುಪಡಿಯ ಆದೇಶದಂತೆ 2 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬಂದಿದೆ ಎಂದರೆ ಸರಿ. ಮೂಲ ಸರ್ವೆ ನಂ. ಸಂಬಂಧಿಸಿದಂತೆ ನಾನು ಮೂಲ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಯಾರಿಗೆ ಯಾರಿಗೆ ಬಂತು ಎಂದು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು